ಅಧ್ಯಕ್ಷರು.—ನೋಡುತ್ತೇವೆಂದರೆ, ಕನ್ಸಿಡರ್ ಮಾಡುತ್ತೇನೆ ಎಂದರ್ಥ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹೀಗೆ ಮಂತ್ರಿಗಳು ಉತ್ತರ ಕೊಟ್ಟರೆ ಹೇಗೆ ? ೨೦೦ ಹೆಣ್ಣುಮಕ್ಕಳಿಗೆ ತೊಂದರೆಯಾಗಿದೆ. ಒಂದು ಕಡೆ ಸಹಾಯ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಇನ್ನೊಂದು ಕಡೆ ಆದರ ಬಗ್ಗೆ ತಿಳುವಳಿಕೆ ಇಲ್ಲದೇ ಹೋದರೆ ಬಹಳ ತೊಂದರೆಯಾಗುತ್ತದೆ.

ಅಧ್ಯಕ್ಷರು.—ಆದರ ಬಗ್ಗೆ ಅವರಿಗೆ ಆಶ್ವಾದಾಯಕವಾದ ಉತ್ತರವನ್ನು ಕೊಡಿ.

ಶ್ರೀ ವಿ.ಎಲ್. ಪಾಟೀಲ್.—ನೋಡುತ್ತೇನೆ.

(ii) ತಮಿಳು ನಾಡಿಗೆ ನೀರನ್ನು ಬಿಡುಗಡೆ ಮಾಡಿರುವುದರಿಂದ ಕೃಷ್ಣರಾಜ ಸಾಗರದ ಆಚ್ಚುಕಟ್ಟು ಪ್ರದೇಶದ ರೈತರಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಜಿ. ಮಾದೇಗೌಡ (ಕಿರುಗಾವಲು).—ಮಾನ್ಯ ಅಧ್ಯಕ್ಷರೆ, ತಮಿಳು ನಾಡಿಗೆ ನೀರನ್ನು ಬಿಡುಗಡೆ ಮಾಡಿರುವುದರಿಂದ ಕೃಷ್ಣರಾಜ ಸಾಗರದ ಆಚ್ಚುಕಟ್ಟು ಪ್ರದೇಶದ ರೈತರಿಗೆ ತೊಂದರೆಯಾಗಿರುವ ವಿಚಾರದ ಬಗ್ಗೆ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ಕೃಷ್ಣರಾಜಸಾಗರದ ವಿಶ್ವೇಶ್ವರಯ್ಯ ನಾಲೆ ಮತ್ತು ಇತರೆ ಆಣೆಕಟ್ಟು ನಾಲೆಗಳ ಕೆಳಗೆ ಸುಮಾರು ೮೦,೦೦೦ ಎಕರೆ ಕಬ್ಬು ಬೆಳೆ ಇರುತ್ತದೆ. ಇದಲ್ಲದೆ ಅನಧಿಕೃತ ಭತ್ತ ಮತ್ತು ಅರೆ ಖುಷ್ಕಿ ಬೆಳೆ ಸುಮಾರು ೩೫,೦೦೦ ಎಕರೆ ಇರುತ್ತದೆ. ತಮಿಳುನಾಡು ಸರ್ಕಾರ ಕಾವೇರಿ ನದಿಯಿಂದ ನೀರಾವರಿಗೆ ನೀರು ಬಿಡಲು ಕೇಳಿಕೊಂಡಿತು.

ಪ್ರಧಾನ ಮಂತ್ರಿಗಳಿಂದ ಬಂದ ಒತ್ತಾಯ, ಕೇಂದ್ರ ಜಲ ಸಂಪನ್ಮೂಲ ಮಂತ್ರಿಯವರ ಕೋರಿಕೆ ನೆರೆ ರಾಜ್ಯಗಳೊಡನೆ ಮಧುರ ಬಾಂಧವ್ಯ ಇಟ್ಟುಕೊಳ್ಳುವ ಉದ್ದೇಶ ಮತ್ತು ಬರದ ಪ್ರಯುಕ್ತ ತಮಿಳು ನಾಡಿನ ರೈತರ ಭವಣೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಫೆಬ್ರುವರಿ ೧೫ರಿಂದ ತಮಿಳು ನಾಡಿಗೆ ೨ ಟಿ.ಎಂ.ಸಿ. ನೀರನ್ನು ಕೃಷ್ಣರಾಜಸಾಗರದಿಂದ ಬಿಟ್ಟಿದೆ. ಇದೇ ಪ್ರಮಾಣದ ನೀರನ್ನು ಹಾರಂಗಿ ಜಲಾಶಯದಿಂದ ಬಿಟ್ಟು ಕೃಷ್ಣರಾಜಸಾಗರ ಜಲಾಶಯಕ್ಕೆ ತುಂಬಿದೆ. ಈಗ ಕೃಷ್ಣರಾಜ ಸಾಗರದ ನೀರಿನ ಮಟ್ಟ ೧೦೦.೬೦ ಅಡಿ ಇದ್ದು ನಿವ್ವಳ ಜಲಸಂಗ್ರಹಣೆ ೧೪.೯೧ ಟಿಎಂಸಿ ಇರುತ್ತದೆ. ಜಲಾಶಯದಲ್ಲಿ ಈಗ ಇರುವ ನೀರು ಮತ್ತು ೩೧-೫-೮೬ರವರೆಗೆ ಲೆಕ್ಕಾಚಾರದಂತೆ ಬರುವ ನೀರು ಸೇರಿ ೩೧-೫-೮೬ರ ತನಕ, ಹಾಲಿ ನಿಂತಿರುವ ಕಬ್ಬು ಮತ್ತು ಇತರೇ ಬೆಳೆಗಳ ಹಾಗೂ ಮೈಸೂರು ಮತ್ತು ಇತರ ಪಟ್ಟಣಗಳ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಸಾಕಾಗುತ್ತದೆ. ಆದುದರಿಂದ ತಮಿಳು ನಾಡಿಗೆ ೨ ಟಿಎಂಸಿ ನೀರನ್ನು ಹಾರಂಗಿ ಜಲಾಶಯದಿಂದ ಕೃಷ್ಣರಾಜ ಸಾಗರದ ಮುಖಾಂತರ ಬಿಟ್ಟಿರುವುದರಿಂದ ಹಾಲಿ ನಿಂತಿರುವ ಬೆಳೆಗಳಿಗೆ ದಕ್ಕೆ ತಗಲುವುದಿಲ್ಲ. ಹಾರಂಗಿ ಯೋಜನೆಯ ಅಧಿಕೃತ ಬೆಳೆಗಳಿಗೂ ದಕ್ಕೆ ಬರುವುದಿಲ್ಲ.

ಬರಗಾಲ ಸಮಯದಲ್ಲಿ ಸ್ವಲ್ಪ ಕಷ್ಟ ಉಂಟಾಗುವುದು ಸಹಜ. ಆದಾಗ್ಯೂ ಎಲ್ಲಾ ಸದಸ್ಯರಿಗೂ ತಿಳಿದಿರುವಂತೆ ನಮ್ಮ ರಾಜ್ಯವು ಸತತವಾಗಿ ನಾಲ್ಕನೇ ಬಾರಿ ಬರ ಅನುಭವಿಸುತ್ತಿದ್ದರೂ ಕೃಷ್ಣರಾಜ ಸಾಗರದ ಆಚ್ಚುಕಟ್ಟುದಾರರಿಗೆ ಎರಡು ಬೆಳೆಗಳಿಗೆ ನೀರು ಕೊಡುತ್ತಲೇ ಬಂದಿದ್ದೇವೆ.

†ಶ್ರೀ ಜಿ. ಮಾದೇಗೌಡ.—ಮಂತ್ರಿಗಳು ಬಹಳ ಸೂಕ್ಷ್ಮವಾಗಿ ಸಣಕುಚಿಕೊಳ್ಳತಕ್ಕ ಉತ್ತರವನ್ನು ಕೊಟ್ಟಿದ್ದಾರೆಂದು ಭಾವಿಸುತ್ತೇನೆ. ಅನಧಿಕೃತ ಭತ್ತದ ಬೆಳೆ ಮತ್ತು ರಾಗಿ ಬೆಳೆ ಇದೆ ಎಂದು ಉತ್ತರಿಸಿದ್ದಾರೆ. ಕೆ.ಆರ್.ಎಸ್ ಆಚ್ಚುಕಟ್ಟು ಪ್ರದೇಶದಲ್ಲಿ ಒಂದು ಲಕ್ಷದ ೨೦ ಸಾವಿರ ಎಕರೆ ನೀರಾವರಿ ಪ್ರದೇಶ ಇದ್ದು ಬೇಸಿಗೆ ಮತ್ತು ಮುಂಗಾರು ಬೆಳೆಗಳನ್ನು ಬೆಳೆಯುವುದಕ್ಕೆ ಅವಕಾಶ ಇದೆ. ಅಂದಾಗ

** ಈ ಪದಗಳನ್ನು ವೈಸ್-ಛೇರ್ಮನ್‌ರವರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿರುತ್ತದೆ.

ಅದು ಹೇಗೆ ಅನಧಿಕೃತ ಬೆಳೆ ಆಗುತ್ತದೆ ? ಪ್ರಧಾನ ಮಂತ್ರಿಗಳು ತಮಿಳ್ನಾಡಿಗೆ ನೀರನ್ನು ಕೊಡ ಬೇಕೆಂದು ಒತ್ತಾಯ ಮಾಡಿದ್ದಾರೆಂದು ಹೇಳಿದ್ದಾರೆ. ಪ್ರಧಾನ ಮಂತ್ರಿಗಳು ಹೇಳಿದರು ಎಂದು ಅವರ ಒತ್ತಾಯಕ್ಕೆ ಮಣಿದು ನಮ್ಮ ದೇಶದ ಹಿತವನ್ನು ಕಡೆಗಣಿಸಿ ಅವರಿಗೆ ನೀರನ್ನು ಕೊಡುವುದು ಸರಿಯಲ್ಲ. ಹೋದ ಸಾರಿ ಹತ್ತು ಟಿ.ಎಂ.ಸಿ. ನೀರನ್ನು ಕೊಟ್ಟಿದ್ದರಿಂದ ಕೋಟ್ಯಾಂತರ ರೂಪಾಯಿ ಬೆಳೆ ಕೆ.ಆರ್.ಎಸ್. ಅಚ್ಚುಕಟ್ಟು ಪ್ರದೇಶದ ರೈತರಿಗೆ ನಷ್ಟವಾಗಿದೆ. ಭತ್ತ ಒಣಗಿ ಹೋಯಿತು. ೨೦ ಕ್ವಿಂಟಾಲ್ ಬೆಳೆಯುತ್ತಿದ್ದುದು ೪–೫ ಕ್ವಿಂಟಾಲ್ ಆಗಿದೆ, ೬೦–೭೦ ಟನ್ ಕಬ್ಬು ಬೆಳೆಯುವ ಕಡೆ ೧೦–೧೫ ಟನ್ ಕೂಡ ಆಗಿಲ್ಲ. ಈ ರೀತಿ ಭಾರೀ ನಷ್ಟವಾಗಿದೆ. ಇದು ದೇವೇಗೌಡರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಕಳೆದ ವರ್ಷ ಇಷ್ಟೊಂದು ನಷ್ಟ ಅನುಭವಿಸಿ ಪುನಃ ಈ ವರ್ಷ ಕೊಡುವುದು ಹೇಗೆ ? ಈಗ ಒಂದು ಲಕ್ಷ ೨೦ ಸಾವಿರ ಎಕರೆಯಲ್ಲಿ ಬೆಳೆ ಇದೆ. ಇರತಕ್ಕ ನೀರು ಮುಂದಿನ ತಿಂಗಳ ಕೊನೆಯವರೆಗೆ ಆಗುವುದಿಲ್ಲ. ಮಳೆ ಬಾದರೆ ಬೆಳೆ ಉಳಿಯುತ್ತದೆ, ಇಲ್ಲದಿದ್ದರೆ ಸಂಪೂರ್ಣ ಭತ್ತ ಮತ್ತು ಕಬ್ಬಿನ ಬೆಳೆ ಕೋಟ್ಯಾಂತರ ರೂಪಾಯಿನದು ನಷ್ಟವಾಗುವುದು ಇದೆ. ಸರ್ಕಾರದವರು ವಾಟರ್ ರೇಟ್ ಕೊಡದಿದ್ದರೆ ಜಪ್ತಿ ಮಾಡಿಸುತ್ತಾರೆ, ಹರಾಜು ಹಾಕಿಸುತ್ತಾರೆ. ಬೆಳೆ ನಷ್ಟವಾದರೆ ಪರಿಹಾರ ಯಾರು ಕೊಡುತ್ತಾರೆ ? ಸರ್ಕಾರ ಕೊಡುವುದಿಲ್ಲ. ನಿಮ್ಮ ಅಥವಾ ಕೇಂದ್ರ ಸರ್ಕಾರದವರ ತಪ್ಪಿನಿಂದ ರೈತರ ಬೆಳೆ ನಷ್ಟವಾಗುವ ಕಾಲದಲ್ಲಿ ಪರಿಹಾರ ಕೊಡುತ್ತೇವೆಂದರೆ ನಾವು ಪ್ರಶ್ನೆ ಕೇಳುವುದಿಲ್ಲ ಪ್ರಧಾನ ಮಂತ್ರಿಗಳಾಗಲಿ, ಯಾರೇ ಆಗಲಿ ನಮ್ಮ ದೇಶದ ರೈತನ ಹಿತವನ್ನು ಕಾಪಾಡುವುದು ಮುಖ್ಯ ಕರ್ತವ್ಯ. ಆ ಭಾಗಕ್ಕೆ ದೇವೇಗೌಡರನ್ನು ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದಿದ್ದೇನೆ. ಹೋದ ಸಾರಿಯೂ ನಷ್ಟವಾಗಿದೆ, ಈ ವರ್ಷವೂ ನಷ್ಟವಾಗುವ ಸಂಭವ ಇದೆ. ದೇವೇಗೌಡರಂ ಹೇಮಾವತಿಯಲ್ಲಿ, ಹಾರಂಗಿಯಲ್ಲಿ ಹೆಚ್ಚಿಗೆ ನೀರಂ ಇದೆ, ಬೆಳೆಗಳನ್ನು ಉಳಿಸುವುದಕ್ಕೆ ಆಗುತ್ತದೆಂದಂ ಭರವಸೆ ಕೊಟ್ಟರೆ ಸಂತೋಷ.

ಶ್ರೀ ಹೆಚ್. ಡಿ. ದೇವೇಗೌಡ.- ಪ್ರಧಾನ ಮಂತ್ರಿಗಳಾಗಲಿ, ಕೇಂದ್ರದ ನೀರಾವರಿ ಸಚಿವರಾಗಲಿ ರಾಜ್ಯ ಸರ್ಕಾರದ ಮೇಲೆ ಒತ್ತಾಯ ತಂದರು ಎಂದರೆ ಅವರ ಮೇಲೆ ಆರೋಪಣೆ ಮಾಡುವುದಕ್ಕೆ ನಾನು ಹೇಳಲಿಲ್ಲ. ಸ್ವಾಭಾವಿಕವಾಗಿ ಇಂಥ ಒಂದು ಕ್ಲಿಷ್ಟ ಸಮಸ್ಯೆ ಬಂದಾಗ ನಮಗೆ ಅವರ ಒಂದು ಅಭಿಪ್ರಾಯವನ್ನು ತಿಳಿಸುತ್ತಾರೆ. ಆದರೆ ಡೈರೆಕ್ಟ್ ಮಾಡುವುದಿಲ್ಲ. ಸಾಧ್ಯವಾದರೆ ಅನುಸರಿಸಿ ಎಂದು ಹೇಳುವುದು ಸಹಜ. ಆದರೆ ನಮ್ಮ ರಾಜ್ಯದ ರೈತರ ಮೇಲೆ ಪ್ರಧಾನ ಮಂತ್ರಿಗಳಿಗೆ ಕೋಪ ಇತ್ತು, ಕೇಂದ್ರದ ನೀರಾವರಿ ಸಚಿವರಿಗೆ ಕಾಳಜಿ ಇಲ್ಲವೆಂದು ಹೇಳುವುದು ಸರಿಯಲ್ಲ. ಈ ಸಂದರ್ಭದಲ್ಲಿ ತಮಿಳ್ನಾಡಿನಲ್ಲಿ ೯ ಲಕ್ಷ ಎಕರೆಗೆ ನೀರಾವರಿ ಕೊರತೆ ಏನಿತ್ತು ಅದರ ಹಿನ್ನೆಲೆಯಲ್ಲಿ ಅವರು ಹೋಗಿ ಒತ್ತಾಯಿಸಿದ್ದಾರೆ. ಏನೇ ಆದರೂ ಅನುಸರಿಸಿಕೊಳ್ಳುವುದಕ್ಕೆ ಸಾಧ್ಯವಾದರೆ ಪ್ರಯತ್ನ ಮಾಡಿ ಎಂದು ತಿಳಿಸಿದರು. ಕಷ್ಟವನ್ನು ಹಂಚಿಕೊಳ್ಳಬೇಕು, ಸುಖವನ್ನು ಹಂಚಿಕೊಳ್ಳಬೇಕು, ನೆರೆ ರಾಜ್ಯದವರು ಇದ್ದೀರಿ, ಒಳ್ಳೆಯ ವಾತಾವರಣವನ್ನು ನಿರ್ಮಿಸುವುದು ಸೂಕ್ತವೆಂದು ಸೂಚಿಸಿದ ಮೇಲೆ ಮತ್ತು ಅವರೂ ಕೂಡ ನಾವು ಕಷ್ಟದಲ್ಲಿದ್ದೇವೆಂದು ಹೇಳಿಕೊಂಡ ಮೇಲೆ ನಾವು ಮಾನವೀಯತೆಯ ದೃಷ್ಟಿಯಿಂದ ಕೊಡ ಬೇಕಾಗುತ್ತದೆ. ಕೆ.ಆರ್.ಎಸ್.ನ ಹಿಂಭಾಗದಲ್ಲಿರತಕ್ಕ ರೈತರು ಇರಬಹುದು, ಹಾರಂಗಿ–ಹೇಮಾವತಿ ಂಭಾಗದಲ್ಲಿರತಕ್ಕ ರೈತರಂ ಇರಬಹುದು ಅವರ ಬೆಳೆಯನ್ನು ಉಳಿಸಿಕೊಡುತ್ತೇವೆ. ಚುಂಚನಕಟ್ಟೆ ತ್ತಿರ ಶ್ರೀರಾಮ ಷುಗರ್ ಫ್ಯಾಕ್ಟರಿ ಇದೆ. ಅಲ್ಲಿಯೂ ಕೂಡ ೪–೫ ಎಕರೆ ಕಬ್ಬಿನ ಬೆಳೆ ನಿಂತಿದೆ. ನಮ್ಮಲ್ಲಿ ಹೆಚ್ಚು ನೀರಿದೆ ಎಂದು ಅಲ್ಲ. ನಮ್ಮಲ್ಲಿ ಸಾಕಷ್ಟು ನೀರು ಇದ್ದು ತಮಿಳ್ನಾಡಿನವರು ಸಾಯುತ್ತಿರುವಾಗ ನಾವು ಎಲ್ಲವನ್ನೂ ಹಿಡಿದಿಟ್ಟುಕೊಳ್ಳುವುದು ಮಾನವೀಯತೆಯ ದೃಷ್ಟಿಯಿಂದ ಸರಿಯಲ್ಲ. ನಮ್ಮ ರೈತರು ಹೇಗೋ ಅವರೂ ಹಾಗೆ. ಅವರು ತುಂಬಾ ಕಷ್ಟದಲ್ಲಿದ್ದೇವೆಂದು ತಿಳಿಸಿದಾ ರೆ. ಅವರ ಸಮಸ್ಯೆ ಎಷ್ಟು ದೂರ ಹೋಗಿದೆ ಎಂದರೆ ಕುಡಿಯುವ ನೀರಿಗೂ ಸಮಸ್ಯೆ ಇದೆ. ನಮ್ಮ ಕಾಡಾ ಅಥಾರಿಟಿಯಲ್ಲಿ ನಾನ್ ಆಫಿಷಿಯಲ್ ಮೆಂಬರ್ಸ್ ಇದ್ದಾರೆ. ಅವರೆಲ್ಲ ಸೇರಿ ೮೦ ಸಾವಿರ ಎಕರೆಗೆ ಎರಡನೇ ಬೆಳೆಗೆ ನೀರು ಕೊಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ೮೦ ಸಾವಿರ ಎಕರೆಗಿಂತ ಹೊರಹೋಗಿ ೩೫ ಸಾವಿರ ಎಕರೆಯಲ್ಲಿ ಅನಧಿಕೃತ ಬೆಳೆಯನ್ನು ಇಟ್ಟಿದ್ದಾರೆಂದು ಅದನ್ನು ಅನ್ ಆಥರೈಸ್ಡ್ ಕಲ್ಟಿವೇಷನ್ ಎಂದು ಭಾವಿಸಬೇಕಾಗಿಲ್ಲ. ಒಟ್ಟು ಒಂದು ಲಕ್ಷ ೩೦ ಸಾವಿರ ಎಕರೆ ಏನಿದೆ ಅದು ನಮಗೆ ಗೊತ್ತಿದೆ. ಕಾಡಾ ಅಥಾರಿಟಿಯವರು ತೀರ್ಮಾನ ಮಾಡಿದ್ದಕ್ಕಿಂತ ಮುಂದೆ ಹೋಗಿದ್ದೇವೆಂದು ಹೇಳಿದೆ. ನಾವು ಕಷ್ಟದಲ್ಲಿದ್ದೇವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ದೇಶದ ಕಡೆಯೂ

ನೋಡಬೇಕು. ಏಪ್ರಿಲ್–ಮೇನಲ್ಲಿ ಮಳೆ ಬಂದರೆ ನಮ್ಮ ರೈತರು ಸುಧಾರಿಸಿಕೊಳ್ಳುತ್ತಾರೆಂಬ ಭರವಸೆ ಇಟ್ಟುಕೊಂಡಿದ್ದೇವೆ. ಕಷ್ಟ–ಸುಖಗಳನ್ನು ನಾವು ಹಂಚಿಕೊಳ್ಳಬೇಕಾಗುತ್ತದೆ. ಸಧ್ಯಕ್ಕೆ ಎಷ್ಟು ಎಚ್ಚರಿಕೆ ವಹಿಸಬೇಕೋ ಅಷ್ಟನ್ನು ವಹಿಸಿ ಅಧಿಕೃತ ಅಥವಾ ಅನಧಿಕೃತ ಬೆಳೆಗಳು ಇರಲಿ ಅವನ್ನು ಉಳಿಸುವುದಕ್ಕೆ ಏನೇನು ಸಾಧ್ಯತೆ ಇದೆಯೋ ಅದನ್ನು ಮಾಡುತ್ತಿದ್ದೇವೆ. ಮೇ ನಲ್ಲಿ ಮಳೆ ಬರುವವರೆಗೆ ಕಾಯಿರಿ ಎಂದು ಹೇಳುವುದಕ್ಕಾಗುತ್ತದೆಯೆ ? ಅವರೂ ಉಳಿಯಬೇಕಲ್ಲ. ಇಂಥ ಸಂದರ್ಭದಲ್ಲಿ ನಾವು ಸಮಸ್ಯೆಗಳನ್ನು ತೊಂದರೆಗಳನ್ನು ಹಂಚಿಕೊಳ್ಳಬೇಕಾಗುತ್ತದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಸ್ವಲ್ಪವಾದರೂ ಸೌಜನ್ಯದಿಂದ ವರ್ತಿಸಿ ಸಮಸ್ಯೆಗಳನ್ನು ಬಗೆಹರಿಸಬೇಕೇ ಹೊರತು ನಮ್ಮ ಅವರ ಬಾಂಧವ್ಯ ಕಡಿದು ಹೋಗಲಿ ಎಂದು ಹೇಳುವುದಕ್ಕಾಗುವುದಿಲ್ಲ. ಈ ಬಗ್ಗೆ ತುಂಬಾ ಆಲೋಚಿಸಿ ನಿರ್ಣಯ ತೆಗೆದುಕೊಂಡಿದ್ದೇವೆ. ಸಾಧ್ಯವಾದ ಮಟ್ಟಿಗೆ ರೈತರ ಹಿತವನ್ನು ಕಾಪಾಡುವುದರಲ್ಲಿ ಸರ್ವ ಪ್ರಯತ್ನ ಮಾಡುತ್ತೇನೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ,

ಶ್ರೀ ಜಿ. ಮಾದೇಗೌಡ.—ಮಾನ್ಯ ದೇವೇಗೌಡರು ಮಾತ್ರವಲ್ಲ ಕಳೆದ ೮–೧೦ ವರ್ಷಗಳಿಂದ ತಮಿಳ್ನಾಡು ರೈತರ ಬಗ್ಗೆ ಕಾಳಜಿ ವಹಿಸುವ ಕಾರ್ಯ ನಡೆದುಕೊಂಡು ಬರುತ್ತಿದೆ. ೮–೧೦ ವರ್ಷಗಳಿಂದ ತಮಿಳ್ನಾಡಿನವರು ಕಾವೇರಿ ನೀರನ್ನು ಉಪಯೋಗ ಮಾಡುತ್ತಿದ್ದಾರೆ. ಆ ವಿವಾದ ಇನ್ನೂ ಬಗೆಹರಿದಿಲ್ಲ. ಪ್ರತಿಸಾರಿ ನೀರು ಕೊಟ್ಟುಕೊಂಡು ಹೋದರೆ ಅವರಿಗೆ ಏನು ಅಭಿಪ್ರಾಯ ಬರುತ್ತದೆಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇದು ನಮ್ಮ ಹಿತಕ್ಕೆ ಧಕ್ಕೆ ಆಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ತಮಿಳ್ನಾಡಿನವರ ಹಿತವನ್ನು ಕಾಪಾಡತಕ್ಕವರು. ಅದೇ ರೀತಿ ಹಾಸನ ಮತ್ತು ಮಂಡ್ಯದವರ ಮೇಲೆ ಅಭಿಮಾನ ಇಟ್ಟು ಮಳೆ ಬಾರದೆ ಮುಂದಕ್ಕೆ ಹೋಗಿ ತೊಂದರೆ ಆದ ಕಾಲದಲ್ಲಿ ತಮಿಳ್ನಾಡಿಗೆ ಅನುಕಂಪ ತೋರಿಸಿದಂತೆ ನಮ್ಮ ಮೇಲೂ ಅನುಕಂಪ ತೋರಿಸಿ ಕೆ.ಆರ್.ಎಸ್. ಅಚ್ಚುಕಟ್ಟು ರೈತರ ಬೆಳೆಯನ್ನು ಉಳಿಸಿಕೊಡುವುದಕ್ಕೆ ಭರವಸೆ ಕೊಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ಹಾಸನದ ರೈತರ ಬಗ್ಗೆ ಕಾಳಜಿ ಇಲ್ಲವೆಂದು ಅಂದುಕೊಳ್ಳಬೇಡಿ. ಹಾಸನದ ರೈತರೂ ಒಂದೇ, ಮಂಡ್ಯದ ರೈತರೂ ಒಂದೆ. ಆವರ ಮೇಲೆ ಎಷ್ಟು ಅಭಿಮಾನ ಇದೆಯೋ ಅಷ್ಟೇ ಅಭಿಮಾನ ಇವರ ಮೇಲೂ ಇದೆ. ಇದರಲ್ಲಿ ಏನು ವಿವಾದ ಇಲ್ಲ. ಸ್ವಾಭಾವಿಕವಾಗಿ ನಾನು ಆ ಭಾಗದಿಂದ ಬಂದಿರುವುದರಿಂದ ಒಂದು ಮಾತನ್ನು ಹೇಳುತ್ತಿದ್ದೇನೆ. ಇದರಲ್ಲಿ ಯಾರೂ ಅಪಾರ್ಥ ಕಲ್ಪಿಸಿಕೊಳ್ಳಬೇಕಾದುದು ಇಲ್ಲ. ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಕೆಲವು ಕೆಲಸಗಳನ್ನು ಅನಿವಾರ್ಯವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಹಿಂದಿನ ಕಾಲದಿಂದಲೂ ಮಾಡಿಕೊಂಡು ಬಂದಿದ್ದೇವೆ. ರಾಜ್ಯದ ಹಿತವನ್ನು ಕಡೆಗಾಣಿಸಿ ಮಾಡಿದ್ದೇವೆಂದು ಹೇಳುವುದಕ್ಕೆ ಸಿದ್ಧವಿಲ್ಲ. ಇದಕ್ಕೆಲ್ಲ ನಾನಾ ಕಾರಣಗಳು ಇವೆ. ಅವುಗಳನ್ನೆಲ್ಲ ವಿಶ್ಲೇಷಿಸುವುದಕ್ಕೆ ಈ ಸಂದರ್ಭದಲ್ಲಿ ಸಾಧ್ಯವಾಗುವುದಿಲ್ಲ. ವಿನಿಪಂಡ್ಯಾಮೇಜ್ ಎಂದು ಏನು ಕರೆಯುತ್ತಾರೆ ಆ ಒಂದು ನಿರ್ಣಯಕ್ಕೆ ಬಂದಿದ್ದೇವೆ ನಮ್ಮಲ್ಲಿರತಕ್ಕ ನೀರು ಹಾಸನ, ಮೈಸೂರಿಗೆ ಬೇಕಾಗುತ್ತದೆ. ಮಧ್ಯೆ ಮಧ್ಯೆ ತಾಲ್ಲೂಕುಗಳಿಗೆ ಕುಡಿಯುವ ನೀರನ್ನು ಕೊಡುತ್ತಿದ್ದೇವೆ. ಹಿಂಗೆ ಅನೇಕ ರೀತಿಯ ಸಮಸ್ಯೆಗಳು ಇವೆ. ಸಾಧ್ಯವಾದಷ್ಟು ಬೆಳೆಯನ್ನು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಳೆ ಬಂದರೆ ಸಾಕು ಎಂದು ದೇವರ ಕಡೆ ಮೊರೆ ಹೋಗುತ್ತೇವೆ. ಇನ್ನು ಏನು ಮಾಡುವುದಕ್ಕಾಗುವುದಿಲ್ಲ.

ನಿಯಮ ೩೫ಳಿರ ಮೇರೆಗೆ

ಅಧ್ಯಕ್ಷರು.—ರಾಮಪ್ಪನವರೇ ನೋಟೀಸ್ ಓದಿರಿ. ನೋಟೀಸ್ ಇಲ್ಲವೇನ್ರಿ. ನೆಕ್ಸ್ಟ್ ಡಿ. ಟಿ. ಜಯಕುಮಾರ್.

(i) ಕಬಿನಿ ಯೋಜನಾ ವೃತ್ತದಲ್ಲಿ ಎನ್.ಎಂ.ಆರ್. ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕೆಲಸಗಾರರ ಬೇಡಿಕೆಗಳ ಬಗ್ಗೆ

ಶ್ರೀ ಡಿ. ಟಿ ಜಯಕುಮಾರ್.—ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕಬಿನಿ ಯೋಜನಾ ವೃತ್ತದಲ್ಲಿ ಎನ್.ಎಂ.ಆರ್. ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ನತದೃಷ್ಟ ಕೆಲಸಗಾರರು ಈ ಕೆಳಕಂಡ ಬೇಡಿಕೆಗಳ ಬಗ್ಗೆ ತಾರೀಖು ೨೬–೨–೧೯೮೬ ರಿಂದ ಧರಣಿ ಮುಷ್ಕರ ನಡೆಸುತ್ತಿರುವುದು ಸರಿಯಷ್ಟೆ.